FA/602982

ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ . ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1141
3. ಉತ್ತರಿಸಬೇಕಾದ ದಿನಾಂಕ : 23-12-2021
4. ಉತ್ತರಿಸುವ ಸಚಿವರು : ಮುಖ್ಯ ಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
1.	(ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ಬಡ್ತಿಯಲ್ಲಿ ಮೀಸಲಾತಿ ಕಾಯ್ದೆ 2018ನ್ನು ಅನುಷ್ಠಾನಗೊಳಿಸಿದ ತರುವಾಯ ಎಲ್ಲಾ ಇಲಾಖೆಗಳಲ್ಲಿ ಮುಂಬಡ್ತಿ ವಂಚಿತರಿಗೆ ಪುನ: ಬಡ್ತಿ ಅವಕಾಶಗಳು ದೊರೆತಿವೆಯೇ ಎಂಬ ಬಗ್ಗೆ ಸಮೀಕ್ಷೆ ಕೈಗೊಳ್ಳಲಾಗಿದೆಯೇ;	ಬಡ್ತಿಯಲ್ಲಿ ಮೀಸಲಾತಿ ಕಾಯ್ದೆ 2018ನ್ನು ಅನುಷ್ಠಾನಗೊಳಿಸಿದ ತರುವಾಯ ಎಲ್ಲಾ ಇಲಾಖೆಗಳಲ್ಲಿ ಮುಂಬಡ್ತಿ ವಂಚಿತರಿಗೆ ಪುನ: ಬಡ್ತಿ ಅವಕಾಶಗಳು ದೊರೆತಿರುವ ಕುರಿತಾದ ವರದಿಯನ್ನು ಆಡಳಿತ ಇಲಾಖೆಗಳಿಂದ ಪಡೆಯಲಾಗಿದೆ.
2.	(ಆ) ಕಾಯ್ದೆ ಅನುಷ್ಠಾನದ ನಂತರವೂ ಕೆಲವು ಅನಗತ್ಯ ಗೊಂದಲಗಳಿಂದಾಗಿ ಬಡ್ತಿ ವಂಚಿತರಾಗಿ ನ್ಯಾಯಾಲಯದ ಮೊರೆ ಹೋಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)	ಈ ಕೆಳಕಂಡ 3 ಇಲಾಖೆಗಳಲ್ಲಿ ನ್ಯಾಯಾಲಯ ಪ್ರಕರಣಗಳು ಬಾಕಿ ಇರುತ್ತವೆ. 1. ತೋಟಗಾರಿಕೆ ಇಲಾಖೆ (ಹಾಪ್‌ಕಾಮ್ಸ್) 2. ಇಂಧನ ಇಲಾಖೆ (ಕೆ.ಪಿ.ಟಿ.ಸಿ.ಎಲ್) 3. ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ)
3.	(ಇ) ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಹಾಗೂ ಮುಂಬಡ್ತಿಯಲ್ಲಿ ಮೀಸಲಾತಿ ಕಾಯ್ದೆಯಂತೆ ಕ್ರಮ ವಹಿಸದಿರುವ ಇಲಾಖೆಗಳಾವುವು;	ಆಡಳಿತ ಇಲಾಖೆಗಳು ನೀಡಿರುವ ಮಾಹಿತಿಯನ್ವಯ ಇಲಾಖೆಗಳಲ್ಲಿ ಕರಡು ಮತ್ತು ಅಂತಿಮ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿರುತ್ತದೆ. ಆದಾಗ್ಯೂ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಕೆಲವು ಇಲಾಖೆಗಳಲ್ಲಿ ಕೆಲವು ವೃಂದದ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವುದು ಬಾಕಿ ಇರುವುದು ಗಮನಕ್ಕೆ ಬಂದಿರುತ್ತದೆ.
4.	(ಈ) ಈ ಸಂಬಂಧ ಎಲ್ಲಾ ಇಲಾಖೆಗಳಿಗೂ ಪತ್ರ ಬರೆದು ವರದಿ ಪಡೆಯಲಾಗುವುದೇ?	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಸೇವಾ ನಿಯಮಗಳು-ವಿಶೇಷ ಕೋಶ)ಯು ಈಗಾಗಲೇ ದಿನಾಂಕ:27.02.2019, 15.05.2019ರ ಆದೇಶಗಳನ್ವಯ ಹಾಗೂ ಸರ್ಕಾರದ ಕಾರ್ಯದರ್ಶಿಯವರಿಂದ ಹೊರಡಿಸಲಾದ ದಿನಾಂಕ:06.11.2019, 31.01.2020ರ ಮತ್ತು ಸರ್ಕಾರದ ಜಂಟಿ ಕಾರ್ಯದರ್ಶಿಯವರಿಂದ

		ಹೊರಡಿಸಲಾದ ದಿನಾಂಕ:06.02.2020, 07.05.2020, 21.08.2020ರ ಅರೆ ಸರ್ಕಾರಿ ಪತ್ರಗಳ ಮೂಲಕ ವರದಿ ಪಡೆಯಲಾಗಿದೆ.

ಕಡತ ಸಂಖ್ಯೆ: ಸಿಆಸುಇ 51 ಎಸ್‌ಆರ್‌ಎಸ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ